ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ಸುನಿಲ್ ದತ್ ಯಾದವ್

ಶ್ರೀ ಎಸ್. ಕೃಷ್ಣಲಾಲ್ -ವಿರುದ್ಧ ಕರ್ನಾಟಕ ರಾಜ್ಯ, ಠಾಣಾಧಿಕಾರಿ ಮುಖಾಂತರ, ಭ್ರಷ್ಟಾಚಾರ ನಿಗ್ರಹದಳ, ಬೆಂಗಳೂರು

ಕ್ರಿಮಿನಲ್ ಅರ್ಜಿಸಂಖ್ಯೆ: 3695/2019, ದಿನಾಂಕ 24 ನೇ ಜೂನ್, 2019.

ಆಜ್ಞೆ

ನ್ಯಾಯಮೂರ್ತಿ ಶ್ರೀ ಎಸ್. ಸುನಿಲ್ ದತ್ ಯಾದವ್:

ಅರ್ಜಿದಾರನು, ಭಾರತ ದಂಡ ಸಂಹಿತೆಯ 420, 465, 468, 471 ಮತ್ತು 120 ' ಬಿ ' ಪ್ರಕರಣದ ಜೊತೆಗೆ ಓದಲಾದ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988 ರ ಪ್ರಕರಣ 13 ( 2) ರೊಂದಿಗೆ ಓದಲಾದ 13 ( 1) ಎ ಪ್ರಕರಣದ ಅಡಿಯಲ್ಲಿ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ಸಂಖ್ಯೆ: 13/2019 ದಾಖಲಾಗಿದ್ದು, ಅದರ ವ್ಯವಹರಣೆಗಳಿಗೆ ಅನುಸಾರವಾಗಿ ಅರ್ಜಿದಾರನು ಬಂಧಿತನಾಗಿದ್ದು, ಆತನು ತನ್ನ ಜಾಮೀನಿನ ಅವಧಿಯನ್ನು ವಿಸ್ತರಿಸಲು ಕೋರಿ ಸಲ್ಲಿಸಿದ ಅರ್ಜಿಯು ಇದಾಗಿದೆ.

2. ಕೌಡನಹಳ್ಳಿ ಗ್ರಾಮದಲ್ಲಿನ ಸರ್ವೆ ನಂ .132 ರಲ್ಲಿನ ಭೂಮಿಯು ಟಿ.ಸಿ. ಪಾಳ್ಯ ಮುಖ್ಯ ರಸ್ತೆಯ ಅಗಲೀಕರಣಕ್ಕೆ ಅಧಿಸೂಚಿತವಾಗಿತ್ತೆಂದು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಾಧಿಕಾರಗಳು ಮಾಲೀಕರಿಗೆ ಹಣಕಾಸಿನ ನಷ್ಟ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳ ವರ್ಗಾವಣೆಯನ್ನು ಟಿಡಿಆರ್ ನೀಡುವುದಾಗಿ ಪ್ರಸ್ತಾಪಿಸಿದ್ದಾರೆಂದು ಹೇಳಿರುತ್ತಾರೆಂಬುದು ಪ್ರಾಸಿಕ್ಯೂಷನ್ನಿನ ವಾದವಾಗಿರುತ್ತದೆ.

3. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅಧಿಸೂಚಿಸಿದ್ದರೂ ಸಹ, ಅರ್ಜಿದಾರ (ಆಪಾದಿತಸಂಖ್ಯೆ: 1) ಮತ್ತು ಇತರ ಆಪಾದಿತನು ಒಳಸಂಚು ಮಾಡಿದ್ದು, ಅದಕ್ಕೆ ಅನುಸಾರವಾಗಿ ಆಸ್ತಿಯ ಖಾತೆಯು ರೇವಣ್ಣನ ಕಾನೂನಾತ್ಮಕ ವಾರಸುದಾರರಾದ ಅಂದರೆ ಮುನಿರಾಜಪ್ಪ ಮತ್ತು ಇತರರ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದು ಹೇಳಲಾಗಿದೆ.ಮುನಿರಾಜಪ್ಪ ಮತ್ತು ಇತರರು, ಬಿ.ಬಿ.ಎಂ.ಪಿ. ಮತ್ತು ಬಿ.ಡಿ.ಎ. ಅಧಿಕಾರಿಗಳ ಪರೋಕ್ಷ ಸಮ್ಮತಿಯಿಂದ ಒಂದು ದಶಕಕ್ಕೂ ಹಿಂದೆಯೇ ನಿವೇಶನಗಳನ್ನು ಮೂರನೇ ಪಕ್ಷಕಾರರಿಗೆ ಮಾರಾಟ ಮಾಡಿದ್ದು ಆಸ್ತಿಯ ಮೇಲೆ ಯಾವುದೇ ಹಕ್ಕನ್ನು ಹೊಂದಿಲ್ಲದಿದ್ದರೂ ಸಹ, ಅರ್ಜಿದಾರನನ್ನೂ ಒಳಗೊಂಡಂತೆ, ಮುನಿರಾಜಪ್ಪ ಮತ್ತು ಇತರರಿಗೆ ಸರ್ವೆ ನಂ:132 ರಲ್ಲಿನ ಭೂಮಿಯ ಸ್ವಾಧೀನಕ್ಕೆ ಅನುಸಾರವಾಗಿ ಟಿ.ಡಿ.ಆರ್. ಅನ್ನು ನೀಡಲಾಗಿದೆ ಎಂದು ಮುಂದುವರೆದು ಹೇಳಲಾಗಿದೆ.ಸ್ವಾಧೀನಪಡಿಸಿಕೊಂಡ ಭೂಮಿಯ ಪ್ರಸ್ತುತ ಮಾಲೀಕರು ಸ್ವಾಧೀನಗೊಂಡಿದೆ ಎಂದು ಹೇಳಲಾದ ಕಟ್ಟಡಗಳ ಅಧಿಭೋಗದಲ್ಲಿದ್ದಾರೆ.ಆದರೆ ಅವುಗಳನ್ನು, ಈವರೆಗೂ ಬಿ.ಬಿ.ಎಂ.ಪಿ.ಯವರು ಕೆಡವಿರುವುದಿಲ್ಲ ಎಂದು ಮುಂದುವರೆದು ಹೇಳಲಾಗಿದೆ.

4. ಅರ್ಜಿದಾರನು (ಆಪಾದಿತಸಂಖ್ಯೆ: 1) ಇತರರೊಂದಿಗೆ ಜೊತೆಗೂಡಿ, ಕಾನೂನು ಬಾಹಿರ ಕೃತ್ಯ ಮತ್ತು ಅಧಿಕೃತ ಸ್ಥಾನ ಮತ್ತು ಪ್ರಾಧಿಕಾರವನ್ನು ದುರುಪಯೋಗ ಮಾಡಿಕೊಂಡು ನಿಜವಾದ ಮಾಲೀಕರುಗಳಲ್ಲದ ವ್ಯಕ್ತಿಗಳಿಗೆ

ಟಿ.ಡಿ.ಆರ್. ನೀಡುವ ಮೂಲಕ ಬಿ.ಬಿ.ಎಂ.ಪಿ ಮತ್ತು ಖಾಸಗಿ ಪಕ್ಷಕಾರರಿಗೆ ಸುಮಾರು 56.33 ಕೋಟಿ ರೂಪಾಯಿಗಳವರೆಗೆ ಅಕ್ರಮವಾಗಿ ನಷ್ಟವುಂಟು ಮಾಡಿರುತ್ತಾರೆಂದು ಮುಂದುವರಿದು ಹೇಳಲಾಗಿದೆ.

5. ಬಿ.ಎಸ್. ಸುರೇಂದ್ರನಾಥ್, ಕೆ. ಗೌತಮ್, ಕೆ. ಸುರೇಶ್ ಮತ್ತು ವಲ್ಲ ಮಾರ್ಕ್ ರಿಯಾಲಿಟಿ ಹೋಲ್ಡಿಂಗ್ (ಪ್ರೈ) ಲಿಮಿಟೆಡ್ರವರು ರೇವಣ್ಣನ ಕುಟುಂಬ ಸದಸ್ಯರೊಂದಿಗೆ ವ್ಯವಹರಿಸಿದ್ದು, ಭೂಮಿಯನ್ನು ರೆವಿನ್ಯೂ ಲೇಔಟ್ ಆಗಿ ಅಭಿವೃದ್ಧಿ ಮಾಡಿ ನಿವೇಶನಗಳನ್ನು ಮಾರಾಟ ಮಾಡಲಾದ ಸಂಗತಿಯನ್ನು ಮರೆಮಾಚಿ, ರೇವಣ್ಣನ ಕುಟುಂಬ ಸದಸ್ಯರಿಂದ ಖಾತೆ ಬದಲಾವಣೆಗೆ ತಹಶೀಲ್ದಾರರಿಗೆ ಅರ್ಜಿ ಸಲ್ಲಿಸುವಂತೆ ಮಾಡಿರುತ್ತಾರೆ ಎಂದು ಆರೋಪಿಸಲಾಗಿದೆ.

6. ಬಿ.ಬಿ.ಎಂ.ಪಿ. ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಸ್ವಾಧೀನಪಡಿಸಿಕೊಳ್ಳಬೇಕಾಗಿದ್ದ ಪ್ರದೇಶದ ವಿಸ್ತೀರ್ಣವನ್ನು ಹೆಚ್ಚಿಸಿರುತ್ತಾರೆ ಮತ್ತು ತದನುಸಾರವಾಗಿ ಭೂಮಿಗೆ ಅಸಮಾನ ಪ್ರಮಾಣದಲ್ಲಿ 158 ಶ್ರೀ ಎಸ್. ಕೃಷ್ಣಲಾಲ್ -ವಿರುದ್ಧ ಕರ್ನಾಟಕ ರಾಜ್ಯ, ಭ್ರಷ್ಟಾಚಾರ ನಿಗ್ರಹದಳ, ಬೆಂಗಳೂರು ಟಿ.ಡಿ.ಆರ್.ಗಳನ್ನು ನೀಡಿದ್ದು, ಇದರಿಂದಾಗಿ, ಬಿ.ಬಿ.ಎಂ.ಪಿ.ಗೆ ನಷ್ಟವುಂಟಾಗಿರುತ್ತದೆ ಎಂದು ಮುಂದುವರಿದು ಹೇಳಲಾಗಿದೆ.ಇದಕ್ಕೆ ಸಂಬಂಧಿಸಿದ ಅವಧಿಯಲ್ಲಿ ಆಡಳಿತದಲ್ಲಿದ್ದ ಅಧಿಕಾರಿಯು ಅರ್ಜಿದಾರನಾಗಿದ್ದನು ಎಂದು ಆರೋಪಿಸಲಾಗಿದೆ.ಇಲಾಖೆಯು ನಡೆಸಿದ ತನಿಖೆಗೆ ಅನುಗುಣವಾಗಿ,ದಿನಾಂಕ: 14.3.2016 ರ ದಿನಾಂಕ:8.7.2019 ರ ನ್ಯಾಯಾಲಯ ಆದೇಶದ ಮೂಲಕ ತೆಗೆದುಹಾಕಲಾಯಿತು. ಸರ್ಕಾರಿ ಆದೇಶದ ಪ್ರಕಾರ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1988 ರ ಪ್ರಕರಣ 17 ( 3) ರ ಅಡಿಯಲ್ಲಿ ದೂರನ್ನು ದಾಖಲು ಮಾಡಿಕೊಳ್ಳಲು ಅನುಮತಿ ಪಡೆದುಕೊಂಡಿದ್ದು,ದಿನಾಂಕ: 11.4.2019 ರ ವರದಿಯ ಪ್ರಕಾರ ಅರ್ಜಿದಾರ ಮತ್ತು ಇತರರನ್ನು ಆಪಾದಿತರೆಂದು ಆರೋಪಿಸಿ ಹೆಚ್ಚಿನ ವಿಚಾರಣೆಯ ಅಗತ್ಯವಿದೆ ಎಂದು ಹೇಳಲಾಗಿದೆ.

7. ಅರ್ಜಿದಾರನು, ದಂಡ ಪಕ್ರಿಯಾ ಸಂಹಿತೆಯ 438 ನೇ ಪ್ರಕರಣದ ಅಡಿಯಲ್ಲಿ ದಾಖಲಾದ ಕ್ರಿ.ಸಂ.ಸಂಖ್ಯೆ:4189/2019 ರಲ್ಲಿ ಸತ್ರ ನ್ಯಾಯಾಧೀಶರ ಮುಂದೆ ನಿರೀಕ್ಷಣಾ ಜಾಮೀನನ್ನು ಕೋರಿದ್ದು,ದಿನಾಂಕ: 27.05.2019 ರ ಆದೇಶದ ಮೂಲಕ ನಿರೀಕ್ಷಣಾ ಜಾಮೀನನ್ನು ತಿರಸ್ಕರಿಸಲಾಯಿತು ಮತ್ತುದಿನಾಂಕ: 14.5.2019 ರಂದು ನೀಡಲಾಗಿದ್ದ ಮಧ್ಯಂತರ ನಿರೀಕ್ಷಣಾ ಜಾಮೀನನ್ನು ಸಹ ರದ್ದು ಮಾಡಲಾಯಿತು.

8. ಅರ್ಜಿದಾರನು, ಈ ಪ್ರಸ್ತುತ ಅರ್ಜಿಯನ್ನು ನಿರೀಕ್ಷಣಾ ಜಾಮೀನನ್ನು ವಿಸ್ತರಿಸಲು ಕೋರಿ ಸಲ್ಲಿಸಿರುತ್ತಾನೆ.

9. ಅರ್ಜಿದಾರನು, ತನ್ನ ಮೇಲೆ ಆರೋಪಿಸಲಾದ ಅಪರಾಧಗಳಿಗೆ ಸಂಬಂಧಿಸಿದಂತೆ ತಾನು ನಿರಪರಾಧಿಯಾಗಿರುವುದಾಗಿ ಹೇಳುವಾಗ, ಕ್ರಿಮಿನಲ್ ಅರ್ಜಿಸಂಖ್ಯೆ: 4189/2019 ರಲ್ಲಿದಿನಾಂಕ: 14.5.2019 ರ ಆದೇಶದ ಮೂಲಕ ಹಿಂದೆ ನೀಡಲಾಗಿದ್ದ ಮಧ್ಯಂತರ ನಿರೀಕ್ಷಣಾ ಜಾಮೀನನ್ನು ನೀಡಿದ ಹಿಂದಿನ ಆದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು, ಅದನ್ನೇ ಗಮನಕ್ಕೆ ತೆಗೆದುಕೊಳ್ಳಬೇಕಾದ ಹಾಗೂ ಅದೇ ರೀತಿಯ ಪರಿಹಾರ ನೀಡುವ ಅಗತ್ಯವಿದೆ ಎಂದು ವಾದಿಸಿರುತ್ತಾನೆ.ಆದೇಶ ಹೊರಡಿಸಿದ ಪ್ರಕಾರ, ಅರ್ಜಿದಾರನು ತನಿಖೆಯ ಅವಶ್ಯಕತೆಯ ದೃಷ್ಟಿಯಲ್ಲಿ ತನಿಖೆಗೆ ಸಹಕಾರ ನೀಡುವ ಉದ್ದೇಶದಿಂದದಿನಾಂಕ: 15.5.2019, 23.05.2019 ಮತ್ತು 25.5.2019 ರಂದು ಪ್ರತ್ಯರ್ಜಿದಾರರ ಕಚೇರಿಗೆ ಭೇಟಿ ನೀಡಿರುತ್ತಾನೆ, ಮತ್ತು ಅರ್ಜಿದಾರನುದಿನಾಂಕ: 18.05.2019, 24.05.2019 ಮತ್ತು 25.5.2019 ರಂದು XXIII ನೇ ನಗರ ಸಿವಿಲ್ ಮತ್ತು

ಸತ್ರ ನ್ಯಾಯಾಧೀಶರ ಎದುರು ಸ್ವತಃ ಹಾಜರಿರುತ್ತಾನೆ ಮತ್ತು ತದನುಸಾರವಾಗಿ, ತನಿಖಾ ಏಜೆನ್ಸಿಯ ಜೊತೆ ಮತ್ತು ಅಧಿವಿಚಾರಣಾ ನ್ಯಾಯಾಲಯದಲ್ಲಿ ಬಾಕಿಯಿರುವ ವ್ಯವಹರಣೆಗಳಿಗೂ ಸಹಕಾರ ನೀಡುತ್ತಿರುತ್ತಾನೆ ಎಂದು ನಿಶ್ಚಯಪೂರ್ವಕವಾಗಿ ಹೇಳಲಾಗಿದೆ.ಟಿ.ಡಿ.ಆರ್. ನೀಡುವಿಕೆಗೆ ಸಂಬಂಧಿಸಿದಂತೆ ಕೆಲವು ಕಡತಗಳು ಕಾಣೆಯಾಗಿದ್ದು, ಅದಕ್ಕೆ ಅರ್ಜಿದಾರನು ಹೊಣೆಗಾರನಾಗಿದ್ದನು ಎಂಬ ಆಧಾರದ ಮೇಲೆ ಅಭಿರಕ್ಷೀಯ ತನಿಖೆಯನ್ನು ಕೋರಲಾಗಿದ್ದು, ಅರ್ಜಿದಾರನು ಆ ಆಧಾರವನ್ನು ಅಲ್ಲಗಳೆದಿರುತ್ತಾನೆ ಮತ್ತು ಸದರಿ ಕಡತಗಳು ತನ್ನ ಸ್ವಾಧೀನದಲ್ಲಿರಲಿಲ್ಲವೆಂದು ಮತ್ತು ಅವುಗಳನ್ನು ತನ್ನ ಪೂರ್ವಾಧಿಕಾರಿಯು ತನಗೆ ಹಸ್ತಾಂತರಿಸಿರುವುದಿಲ್ಲವೆಂದು ಒತ್ತಿ ಹೇಳುತ್ತಾನೆ.

10. ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಶ್ರೀ ವೆಂಕಟೇಶ್ ಪಿ. ದಳವಾಯಿ, ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್, ಆಕ್ಷೇಪಣೆಗಳ ವಿವರಣಾತ್ಮಕ ಹೇಳಿಕೆಯನ್ನು ಸಲ್ಲಿಸಿದ್ದು, ಕೌಡನಹಳ್ಳಿ ಗ್ರಾಮದ ಸರ್ವೆ ನಂ .132 ಕ್ಕೆ ಸಂಬಂಧಿಸಿದ ಪ್ರಸ್ತುತ ವಿವಾದಕ್ಕೆ ಸಂಬಂಧಿಸಿದಂತೆ ಅರ್ಜಿದಾರನು ಟಿ.ಡಿ.ಆರ್. ನೀಡಿಕೆಗೆ ಸಂಬಂಧಿಸಿದಂತಹ ಕಡತಗಳನ್ನು ಆಡಳಿತದಲ್ಲಿದ್ದ ಅಧಿಕಾರಿಗೆ ಹಸ್ತಾಂತರಿಸಿರುವುದಿಲ್ಲವೆಂದು ಹೇಳುತ್ತಾರೆ.ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದ ಮೂಲ ಕಡತಸಂಖ್ಯೆ: ಡಿ.ಆರ್.ಸಿ/99-002958 ಲಭ್ಯವಿರುವುದಿಲ್ಲ ಮತ್ತು ಅದನ್ನು ಹಸ್ತಾಂತರಿಸಿರುವುದಿಲ್ಲವೆಂದು ಒತ್ತಿ ಹೇಳುತ್ತಾರೆ.ಅರ್ಜಿದಾರನು, ಇತರ ಆಪಾದಿತರೊಂದಿಗೆ ಜೊತೆಗೂಡಿ, ಪ್ರಸ್ತುತ ಭೂಮಾಲೀಕರಿಗೆ ಅಕ್ರಮವಾಗಿ ನಷ್ಟವುಂಟು ಮಾಡುವ ಉದ್ದೇಶದಿಂದ ಕಡತಗಳನ್ನು ಅಕ್ರಮವಾಗಿ ತಿದ್ದಿರುತ್ತಾರೆಂದು ಮುಂದುವರಿದು ವಾದಿಸುತ್ತಾರೆ.

11. ಭ್ರಷ್ಟಾಚಾರ ನಿಗ್ರಹದಳವು (ಎಸಿಬಿ) ವಿಷಯವನ್ನು ವಿಚಾರಣೆ ಮಾಡಿದ ನಂತರ, ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 17 ( ಎ) ಪ್ರಕರಣದ ಪ್ರಕಾರ ಯುಕ್ತ ಅನುಮತಿಯನ್ನು ಪಡೆದು ಮೇಲ್ನೋಟಕ್ಕೆ ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದು, ಎಫ್.ಐ.ಆರ್.ಅನ್ನು ದಾಖಲು ಮಾಡಿಕೊಳ್ಳಲಾಗಿದೆ.ತನಿಖೆಯು ಪ್ರಗತಿಯಲ್ಲಿದೆ.ಸ್ವಾಧೀನಪಡಿಸಿಕೊಂಡ ಭೂಮಿಯ ವಿಸ್ತೀರ್ಣವನ್ನು ಹೆಚ್ಚಿಸಲಾಯಿತು ಮತ್ತು ಪರಿಣಾಮವಾಗಿ ಇದು ಸ್ವಾಧೀನಪಡಿಸಿಕೊಂಡ ಭೂಮಿಯ ವಿಸ್ತೀರ್ಣಕ್ಕೆ ಅಸಮಾನವಾಗಿ ಟಿ.ಡಿ.ಆರ್. ನೀಡಿಕೆಗೆ ಎಡೆಮಾಡಿಕೊಟ್ಟಿತು ಎಂಬ ಅಂಶವು ಇಲ್ಲಿಯವರೆಗೆ ನಡೆಸಲಾದ ತನಿಖೆಯ ಆಧಾರದ ಮೇಲೆ ಬೆಳಕಿಗೆ ಬಂದ ಅಂಶವಾಗಿದೆ ಎಂದು ಹೇಳಲಾಗಿದೆ.ಅರ್ಜಿದಾರ ಮತ್ತು ಇತರೆ ಅಧಿಕಾರಿಗಳು ಸೇರಿ ದಾಖಲೆಗಳನ್ನು ಬದಲಾಯಿಸಿದ್ದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟಾಗಿದೆ ಮತ್ತು ಖಾಸಗಿ ವ್ಯಕ್ತಿಗಳ ಪರವಾಗಿದೆ ಎಂದು ಹೇಳಲಾಗಿದೆ.ಅರ್ಜಿದಾರನು,ದಿನಾಂಕ: 15.5.2019, 23.5.2019 ಮತ್ತು 25.5.2019 ರಂದು ಹಾಜರಾಗುವ ಮೂಲಕ ತನಿಖಾ ಏಜೆನ್ಸಿಗೆ ಸಹಕಾರ ನೀಡಿರುತ್ತೇನೆಂದು ಕೇಮು ಮಾಡಿದ್ದರೂ ಸಹ, ಮತ್ತು ಅರ್ಜಿದಾರನು ಪ್ರತ್ಯರ್ಜಿದಾರರ ಕಛೇರಿಗೆ ಬಂದಿದ್ದರೂ ಸಹ, ತನಿಖಾಧಿಕಾರಿಯ ಮುಂದೆ ಹಾಜರಾಗದೆ ಹೊರ ನಡೆದಿರುತ್ತಾನೆ ಎಂದು ಒತ್ತಿ ಹೇಳಲಾಗಿದೆ.ಸಂಬಂಧಪಟ್ಟ ಅಧಿಕಾರಿಯ ಮುಂದೆ ಹಾಜರಾಗಿ ಚೀಟಿಯ ಮೇಲೆ ಸಹಿಯನ್ನು ಪಡೆದು ಅದನ್ನು ಪ್ರತ್ಯರ್ಜಿದಾರರ ಕಛೇರಿಯ ಸ್ವಾಗತಕಾರರಿಗೆ ಹಿಂತಿರುಗಿಸುವುದು* ಹಾಜರಾತಿಯನ್ನು ಖಚಿತಪಡಿಸಿಕೊಳ್ಳುವ ಅಗತ್ಯ ಕಾರ್ಯ ವಿಧಾನವಾಗಿರುತ್ತದೆಂದು ಒತ್ತಿ ಹೇಳಲಾಗಿದೆ.ಸಂಬಂಧಪಟ್ಟ ಅಧಿಕಾರಿಗಳಿಂದ ಅಂತಹ ಹಿಂಬರಹವನ್ನು ಪಡೆದುಕೊಂಡಿಲ್ಲವೆಂದು ಮತ್ತು ಅರ್ಜಿದಾರನು ತನಿಖೆಯನ್ನು ನಡೆಸುತ್ತಿದ್ದ ಪೊಲೀಸ್ ಉಪ ಅಧೀಕ್ಷಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರನ್ನು ಭೇಟಿ ಮಾಡಿರುತ್ತಾನೆ ಎಂಬುದನ್ನು ಚೀಟಿಗಳು (ಹಿಂಬರಹವಿಲ್ಲದ) ತೋರಿಸಿದರೂ ಸಹ, ಅರ್ಜಿದಾರನು ಅಂತಹ ಅಧಿಕಾರಿಗಳನ್ನು

ಭೇಟಿ ಮಾಡಿರುವುದಿಲ್ಲ ಎಂದು ಹೇಳಲಾಗಿದೆ.ಆದ್ದರಿಂದ ಅರ್ಜಿದಾರನಿಗೆ ಈ ವಿವೇಚನೆಯನ್ನು ನೀಡಲೇಬಾರದಿತ್ತು ಎಂದು ವಾದಿಸಲಾಗಿದೆ.

12. ಮುಂದುವರಿದು, ಕಡತದ ಅಭಿರಕ್ಷಕನಾಗಿದ್ದ ಅರ್ಜಿದಾರನು ಬಹುಮುಖ್ಯ ಸಾಕ್ಷ್ಯವನ್ನು ನಾಶ ಮಾಡುವ ಉದ್ದೇಶದಿಂದ ಕಡತವನ್ನು ಕಚೇರಿಯಿಂದ ಬೇರೆಡೆ ಸಾಗಿಸಿದ್ದಾನೆ ಎಂದು ಹೇಳಲಾಗಿದೆ.ಆ ಅವಧಿಯಲ್ಲಿ ಅರ್ಜಿದಾರನು ಬಿ.ಬಿ.ಎಂ.ಪಿ.ಯ ಟಿ.ಡಿ.ಆರ್. ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದನು ಮತ್ತು ಟಿ.ಡಿ.ಆರ್. ನೀಡಿಕೆಗೆ ಸಂಬಂಧಪಟ್ಟ ಅಂತಹ ಕಡತಗಳು (ಸುಮಾರು 47 ಕಡತಗಳು) ಎಂದರೆ, ಅಭಿವೃದ್ಧಿ ಹಕ್ಕು ಪ್ರಮಾಣಪತ್ರ (ಡಿ ಆರ್ ಸಿ) ಕಡತಗಳು ಕಾಣೆಯಾಗಿದ್ದವು ಎಂದು ಹೇಳಲಾಗಿದೆ.ತದನುಸಾರವಾಗಿ, ಅರ್ಜಿದಾರನು ಒಬ್ಬ ಬ ಅಧಿಕಾರಿಯಾಗಿದ್ದು, ಸಾಕ್ಷ್ಯವನ್ನು ನಾಶ ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾನೆ ಮತ್ತು ಆದ್ದರಿಂದ, ಒಳಸಂಚನ್ನು ತನಿಖೆ ಮಾಡುವ ಅವಶ್ಯಕತೆಯ ದೃಷ್ಟಿಯಲ್ಲಿ ೨ ಅರ್ಜಿದಾರನ ಅಭಿರಕ್ಷೀಯ ತನಿಖೆಯು ಅಗತ್ಯವಾಗಿರುತ್ತದೆ ಎಂದು ಹೇಳಲಾಗಿದೆ.

13. ಎರಡೂ ಪಕ್ಷಕಾರರ ಪರ ವಾದ ಮಂಡಿಸಿದ ನ್ಯಾಯವಾದಿಗಳ ವಾದವನ್ನು ಆಲಿಸಲಾಗಿದೆ.

14. ಪ್ರತ್ಯರ್ಜಿದಾರರು, ಇಲ್ಲಿಯವರೆಗೆ ನಡೆಸಲಾದ ತನಿಖೆಗೆ ಸಂಬಂಧಿಸಿದಂತೆ, ದಸ್ತಾವೇಜುಗಳನ್ನು ಈ ನ್ಯಾಯಾಲಯದ ಅವಗಾಹನೆಗಾಗಿ ಸಲ್ಲಿಸಿರುತ್ತಾರೆ.

15. ನಾನು ಸಾಕ್ಷ್ಯಾಧಾರವನ್ನು ಎಚ್ಚರಿಕೆಯಿಂದ ಅವಗಾಹಿಸಿ, ಅದರಲ್ಲಿನ ವಿಷಯಗಳನ್ನು ಗಮನಿಸಿದ್ದೇನೆ.

16. ಸರ್ವೋಚ್ಚ ನ್ಯಾಯಾಲಯವು, ಶ್ರೀ ಗುರಕ್ಸ್ ಸಿಂಗ್ ಸಿಯಾ ಮತ್ತು ಇತರರು ವಿರುದ್ಧ— ಸ್ಟೇಟ್ ಆಫ್ ಪಂಜಾಬ್ ಮೊಕದ್ದಮೆಯ ತೀರ್ಪಿನಲ್ಲಿ ಮತ್ತು ತರುವಾಯ ವರದಿಯಾದ ಸಿದ್ದರಾಮ ಸತ್ತಿಂಗಪ್ಪ ಮಹೆತ್ರೆ -ವಿರುದ್ಧ-ಸ್ಟೇಟ್ ಆಫ್ ಮಹಾರಾಷ್ಟ್ರ ಮತ್ತು ಇತರರು ಮೊಕದ್ದಮೆಯ ತೀರ್ಪಿನಲ್ಲಿಯೂ ಸಹ ನಿರೀಕ್ಷಣಾ ಜಾಮೀನನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಕಾನೂನಾತ್ಮಕ ಮಾರ್ಗಸೂಚಿಗಳನ್ನು ರಚಿಸಿದೆ.ಸರ್ವೋಚ್ಚ ನ್ಯಾಯಾಲಯವು ಸಿದ್ದರಾಮ ಸಂಗಪ್ಪ (ಮೇಲೆ ಹೇಳಿದ) ಚ ಪ್ರಕರಣದಲ್ಲಿ 112 ನೇ ಪ್ಯಾರಾದಲ್ಲಿ ವಿವರಿಸಲಾದಂತೆ, ಅರ್ಜಿಯನ್ನು ಪರಿಗಣಿಸುವಾಗ,* ಗಮನದಲ್ಲಿಟ್ಟುಕೊಳ್ಳಲೇಬೇಕಾದ ಹಲವಾರು ಮಾರ್ಗಸೂಚಿಗಳನ್ನು ಅವಲೋಕಿಸಿರುತ್ತದೆ.ಪ್ರಸ್ತುತ ಸಂಗತಿಗಳಿಗೆ ಸಂಬಂಧಿಸಿದ ನಿರ್ದಿಷ್ಟ ಪ್ರಸಕ್ತತೆಯು ಏನಾಗಿರುತ್ತದೆಯೋ ಅದು ಅವಲೋಕನೆಯಲ್ಲಿ ಒಳಗೊಂಡಿರುವಂತಹ ಮಾರ್ಗಸೂಚಿಯಾಗಿರುತ್ತದೆ:

“vi. ನಿರ್ದಿಷ್ಟವಾಗಿ, ವ್ಯಾಪಕ ಪರಿಣಾಮ ಬೀರುವ ಮೊಕದ್ದಮೆಗಳಲ್ಲಿ ನಿರೀಕ್ಷಣಾ ಜಾಮೀನನ್ನು ನೀಡುವುದರ ಪ್ರಭಾವವು ಬಹಳ ಸಂಖ್ಯೆಯ ಜನರನ್ನು ಬಾಧಿಸುತ್ತಿರುವುದು;

ix.ಸಾಕ್ಷ್ಯಗಳ ನಾಶ ಮಾಡುವ ಯುಕ್ತ ಶಂಕೆಯನ್ನು ಅಥವಾ ಫಿರ್ಯಾದುದಾರನಿಗೆ ನೀಡುವ ಬೆದರಿಕೆಯ ಶಂಕೆಯನ್ನು ನ್ಯಾಯಾಲಯವು, ಪರಿಗಣಿಸುವುದು.೨೨

17. ಪ್ರಾಸಿಕ್ಯೂಷನ್ ನಿರೂಪಿಸಿದ ವಾಸ್ತವಾಂಶಗಳಲ್ಲಿ, ಸ್ವಾಧೀನಪಡಿಸಿಕೊಂಡ ಭೂಮಿಯ ವಾಸ್ತವಿಕ ವಿಸ್ತೀರ್ಣಕ್ಕೆ ಅಸಮಾನವಾಗಿ ಟಿ.ಡಿ.ಆರ್. ಪಡೆದುಕೊಳ್ಳುವ ಕಾರ್ಯವಿಧಾನವು ತನಿಖೆಯಲ್ಲಿರುವ ವಿಷಯವಾಗಿದೆ.ಭೂ ಮಾಲೀಕರು ಮತ್ತು ಇತರರ ಪರೋಕ್ಷ ಸಮ್ಮತಿಯಲ್ಲಿ ಬಹುದೊಡ್ಡ ಒಳಸಂಚಿನ

ಭಾಗಿದಾರರೆಂದು ಹೇಳಲಾದ ಬಿ.ಬಿ.ಎಂ.ಪಿ. ಅಧಿಕಾರಿಗಳ ಒಳಗೊಳ್ಳುವಿಕೆಯ ಪ್ರಶ್ನೆಯು ಇನ್ನೂ ಕೂಡ ಬಗೆಹರಿಸಬೇಕಾದುದಾಗಿದೆ.*

18. ಪ್ರತ್ಯರ್ಜಿದಾರರು, ಸರ್ವೆ ನಂ. 132 ಕ್ಕೆ ಸಂಬಂಧಿಸಿದಂತೆ ನೀಡಲಾದ ಟಿ.ಡಿ.ಆರ್ಗೆ ಸಂಬಂಧಿಸಿದ ಮೂಲ ಕಡತಸಂಖ್ಯೆ: ಡಿಆರ್ಸಿ/99-002958 ಕಾಣೆಯಾಗಿದೆಯೆಂದು ಅಧಿಕೃತವಾಗಿ ಹೇಳಿರುತ್ತಾರೆ.ಅರ್ಜಿದಾರನು ಸದರಿ ಕಡತವನ್ನು ತನ್ನ ಪದಧಾರಿ ಅಧಿಕಾರಿಗೆ ಹಸ್ತಾಂತರಿಸಿರುವುದಿಲ್ಲವೆಂದು ಮತ್ತು ಅರ್ಜಿದಾರನು ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಂದರೆ,ದಿನಾಂಕ: 14.12.2013 ರಿಂದ 04.09.2014, 29.12.2016 ರಿಂದ 30.06.2017 ಮತ್ತು 01.07.2017 ರಿಂದ 25.07.2018 ರ ಅವಧಿಯಲ್ಲಿ ಟಿ.ಡಿ.ಆರ್. ನೀಡಿಕೆಗೆ ಸಂಬಂಧಿಸಿದ ಸುಮಾರು* 47 ಕಡತಗಳು ಕಾಣೆಯಾಗಿದ್ದವೆಂದೂ ಸಹ ಹೇಳಲಾಗಿದೆ.ವಿಚಾರಣೆಗೆ ಸಂಬಂಧಪಟ್ಟ ಸಾಕ್ಷ್ಯಾಧಾರಗಳನ್ನು ಬೆಳಕಿಗೆ ತರುವುದು ತನಿಖಾ ಪ್ರಾಧಿಕಾರದ ಪ್ರತ್ಯೇಕ ಕಾರ್ಯವ್ಯಾಪ್ತಿಗೆ ಸೇರಿದ ವಿಷಯವಾಗಿರುತ್ತದೆ.

19. ವಿಚಾರಣೆಯಲ್ಲಿರುವ ವ್ಯಾಜ್ಯಕ್ಕೆ ಸಂಬಂಧಿಸಿದ ಕಡತವೂ ಒಳಗೊಂಡಂತೆ, ಕಾಣೆಯಾದ ಕಡತಗಳಿದ್ದವು ಎಂಬುದು ನಿರೂಪಿತವಾದ ಸಂಗತಿಯಾಗಿರುತ್ತದೆ.ಪ್ರಸ್ತುತ ಮೊಕದ್ದಮೆಯು ಒಂದು ಬಹುದೊಡ್ಡ ಗುಂಪಿಗೆ ಸೇರಿದ ಮೊಕದ್ದಮೆಯಾಗಿದ್ದು, ಅದರಲ್ಲಿ, ಪ್ರತ್ಯರ್ಜಿದಾರ ಪ್ರಾಧಿಕಾರ ಗುರುತಿಸಿದಂತೆ, ಟಿ.ಡಿ.ಆರ್. ನೀಡಿಕೆಗೆ ಸಂಬಂಧಿಸಿದಂತೆ ಅದೇ ರೀತಿಯ ಅಪರಾಧಗಳನ್ನು ಬೆಳಕಿಗೆ ತರುವ ಅವಶ್ಯಕತೆಯಿದ್ದು, ಅದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ.ಖಾಸಗಿ ವ್ಯಕ್ತಿಗಳ ಏಳಿಗೆಗಾಗಿ ರಾಜ್ಯ ಬೊಕ್ಕಸಕ್ಕೆ ಅಕ್ರಮ ನಷ್ಟ ಉಂಟಾಗುವ ರೀತಿಯಲ್ಲಿ ಅರ್ಜಿದಾರ ಮತ್ತು ಇತರ ಅಧಿಕಾರಿಗಳು ಸೇರಿ ಪಿತೂರಿ ನಡೆಸಿದ್ದು, ಆ ಬಗ್ಗೆ*ದಿನಾಂಕ: 8.7.2019 ರ ನ್ಯಾಯಾಲಯ ಆದೇಶದ ಮೂಲಕ ಸೇರಿಸಲಾಯಿತು ಮತ್ತು ಸರಿಪಡಿಸಲಾಯಿತು.*ದಿನಾಂಕ: 8.7.2019 ರ ನ್ಯಾಯಾಲಯ ಆದೇಶದ ಮೂಲಕ ತೆಗೆದುಹಾಕಲಾಯಿತು ಮತ್ತು ಸೇರಿಸಲಾಯಿತು ಅಭಿರಕ್ಷೀಯ ವಿಚಾರಣೆ ಸೇರಿದಂತೆ ಪ್ರಾಧಿಕಾರದಿಂದ ತನಿಖೆಯನ್ನು ನಡೆಸುವ ಅಗತ್ಯವಿರುತ್ತದೆ.

20. ನಿರೀಕ್ಷಣಾ ಜಾಮೀನನ್ನು ನೀಡುವ ಆದೇಶಗಳಿಗೆ ಅನುಸಾರವಾಗಿ ನಡೆಯುವ ವಿಚಾರಣೆಯು ಅಭಿರಕ್ಷೀಯ ವಿಚಾರಣೆಯಿಂದ ಗುಣಾತ್ಮಕವಾಗಿ ಭಿನ್ನವಾಗಿರುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

21. ಸರ್ವೋಚ್ಚ ನ್ಯಾಯಾಲಯವು, ವರದಿಯಾದ ಸಿ.ಬಿ.ಐ.ನಿಂದ ಪ್ರತಿನಿಧಿಸಲ್ಪಟ್ಟ ಚ ರಾಜ್ಯ -ವಿರುದ್ಧ-ಅನಿಲ್ ಶರ್ಮಾ(1997) 7 ಎಸ್ಸಿಸಿ 187 ಪ್ರಕರಣದಲ್ಲಿ, ಅಭಿರಕ್ಷೀಯ ವಿಚಾರಣೆಯ ಅಗತ್ಯತೆ ಮತ್ತು ಸೂಕ್ತ ಸಂದರ್ಭಗಳಲ್ಲಿ ಅದರ ಅವಶ್ಯಕತೆಯನ್ನು ಸರಿಯಾದ ರೀತಿಯಲ್ಲಿ ದಿನಾಂಕ: 8.7.2019 ರ ನ್ಯಾಯಾಲಯ ಆದೇಶದ ಮೂಲಕ ಸೇರಿಸಲಾಯಿತು. ಈ ಕೆಳಗಿನಂತೆ ನೀಡಿರುತ್ತದೆ:

"6. ನಾವು, ಸಂಹಿತೆಯ 438 ನೇ ಪ್ರಕರಣದ ಅಡಿಯಲ್ಲಿ ಅನುಕೂಲಕರವಾದ ಆದೇಶದೊಂದಿಗೆ ಸಮರ್ಪಕವಾಗಿ ಅಡಗಿರುವ ಶಂಕಿತ ವ್ಯಕ್ತಿಯನ್ನು ಪ್ರಶ್ನಿಸುವುದಕ್ಕಿಂತ, ಬಯಲಿಗೆ ತರುವ ಉದ್ದೇಶ ಹೊಂದಿರುವ ಅಭಿರಕ್ಷೀಯ ವಿಚಾರಣೆಯು ಗುಣಾತ್ಮಕವಾಗಿದೆ ಎಂಬ ಸಿ.ಬಿ.ಐ. ನಿವೇದನೆಯಲ್ಲಿ ವಿವೇಚನೆಯಿರುವುದನ್ನು ಕಂಡುಕೊಂಡಿದ್ದೇವೆ.ಇಂತಹ ಪ್ರಕರಣದಲ್ಲಿ, ಶಂಕಿತ ವ್ಯಕ್ತಿಯ ಪರಿಣಾಮಕಾರಿಯಾದ ತನಿಖೆಯು ಹಲವು ಉಪಯುಕ್ತ ಮಾಹಿತಿಗಳನ್ನು ಮತ್ತು ಅಡಗಿಸಲಾಗಿರುವ ಸಾಕ್ಷ್ಯಗಳನ್ನೂ ಸಹ ಹೊರತೆಗೆಯುವಲ್ಲಿ ಮಹತ್ವವಾದ ಅನುಕೂಲವಾಗುತ್ತದೆ.ಶಂಕಿತ ವ್ಯಕ್ತಿಗೆ, ತನಿಖೆಯ

ಸಂದರ್ಭದಲ್ಲಿ ತನಗೆ ಪೂರ್ವ-ಬಂಧನ ಜಾಮೀನು ಆದೇಶದಿಂದ ಸಂಪೂರ್ಣವಾದ ರಕ್ಷಣೆ ದೊರಕುತ್ತದೆ ಮತ್ತು ತನಿಖೆಯಿಂದ ಪ್ರತ್ಯೇಕಿಸಲಾಗುತ್ತದೆ ಎಂದು ಗೊತ್ತಾದರೆ, ಅಂತಹ ತನಿಖೆಯಲ್ಲಿನ ಸಫಲತೆಯು ಕೈತಪ್ಪಿ ಹೋಗುತ್ತದೆ.ಅಂತಹ ಸಂದರ್ಭದಲ್ಲಿ, ಅನೇಕ ಸಲ, ತನಿಖೆಯು ಕೇವಲ ಒಂದು ಮಾಮೂಲಿನ ಕ್ರಮವಾಗಿ ಅಭಿರಕ್ಷೀಯ ತನಿಖೆಯು, ಮೂರನೇ ದರ್ಜೆಯ ಉಗ್ರವಾದ ಮತ್ತು ದೀರ್ಘವಾದ ತನಿಖೆಗೆ ವ್ಯಕ್ತಿಯು ಒಳಗಾಗುವ ಅಪಾಯದಿಂದ ಕೂಡಿರುತ್ತದೆ ಎಂಬ ವಾದವನ್ನು ಅನುಮೋದನೆ ಮಾಡಬಾರದು, ಏಕೆಂದರೆ, ಅಂತಹ ವಾದವನ್ನು ಎಲ್ಲಾ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಎಲ್ಲಾ ಆಪಾದಿತರು ಮಂಡಿಸಬಹುದಾಗಿರುತ್ತದೆ.ಜವಾಬ್ದಾರಿಯುತ ಪೊಲೀಸ್ ಅಧಿ ಕಾರಿಗಳು ತಾವು ಜವಾಬ್ದಾರಿಯುತ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ನ್ಯಾಯಾಲಯವು ಪರಿಭಾವಿಸಬೇಕು ಮತ್ತು ಅಪರಾಧಗಳನ್ನು ಹೊರತೆಗೆಯುವ ಕಾರ್ಯದ ಹೊಣೆಯನ್ನು ಹೊತ್ತಿರುವವರು ತಾವೇ ಅಪರಾಧಿಗಳಂತೆ ನಡೆದುಕೊಳ್ಳಬಾರದು '.

22. ಪ್ರಸ್ತುತ ಮೊಕದ್ದಮೆಯಲ್ಲಿ ರೂಪಿಸಲಾದ ಸಂಗತಿಗಳಲ್ಲಿ, ಪ್ರಸ್ತುತ ಅಪರಾಧದ ಪ್ರಮಾಣ ಮತ್ತು ಇದೇ ರೀತಿಯ ಅಪರಾಧಗಳ ಸಂಭಾವ್ಯ ಬಹಿರಂಗಪಡಿಸುವಿಕೆಯನ್ನು ದಿನಾಂಕ:8.7.2019 ರ ನ್ಯಾಯಾಲಯ ಆದೇಶದ ಮೂಲಕ ತೆಗದುಹಾಕಲಾಯಿತು. ಪರಿಗಣಿಸಿ, ಪ್ರತ್ಯರ್ಜಿದಾರ-ಪ್ರಾಧಿಕಾರವು ಪ್ರತಿಪಾದಿಸಿದಂತೆ ಅಭಿರಕ್ಷೀಯ ತನಿಖೆಯ ಅಗತ್ಯವಿರುತ್ತದೆ.

23. ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಸಾಕ್ಷಿಗಳ ಅಂದರೆ ವಿಚಾರಣೆಗೆ ಸಂಬಂಧಿಸಿದ ಕಾಗದ-ಪತ್ರಗಳ ಕೂಲಂಕಷ ಅವಗಾಹನೆಯು, ತನಿಖಾ ಪ್ರಾಧಿಕಾರಕ್ಕೆ ಯುಕ್ತವಾದ ವಿವೇಚನೆಯನ್ನು ಒದಗಿಸಿ ಸಹಕಾರವನ್ನು ನೀಡುತ್ತದೆ.ತನಿಖೆಯು ನಿರ್ಣಾಯಕ ಹಂತದಲ್ಲಿರುವುದರಿಂದ ಪ್ರಸ್ತುತ ಆದೇಶದಲ್ಲಿ ಅದನ್ನು ಉಲ್ಲೇಖಿಸುವ ಮೂಲಕ ದಾಖಲೆಗಳನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಬಹಿರಂಗಪಡಿಸುವಷ್ಟರಮಟ್ಟಿಗೆ ತನಿಖೆಯನ್ನು ಉಲ್ಲೇಖಿಸುವುದು ಮತ್ತು ಮಂಡಿಸುವುದು ಸೂಕ್ತವಾಗುವುದಿಲ್ಲ ಮತ್ತು ಸಾಕ್ಷ್ಯವನ್ನು ನಾಶಪಡಿಸುವ ಸಾಧ್ಯತೆಯಿಂದ ಆಪಾದಿತ ಮತ್ತು ಇತರರನ್ನು ತಡೆಯಬಹುದಾದ ಅ ಂ ಥ ಬಹಿರಂಗಪಡಿಸುವಿಕೆಯಿ ಂ ದ *ದಿನಾಂಕ: 8.7.2019 ರ ನ್ಯಾಯಾಲಯ ಆದೇಶದ ಮೂಲಕ ತೆಗೆದುಹಾಕಲಾಯಿತು ಮತ್ತು ಸರಿಪಡಿಸಲಾಯಿತು ತನಿಖೆಗೆ ಅಡ್ಡಿಯಾಗಬಾರದು.

24. ವಾಸ್ತವವಾಗಿ, ಅರ್ಜಿದಾರನು ಕಡತಗಳ ಸುಪರ್ದಿ ಹೊಂದಿದ್ದ ಅವಧಿಗೆ ಸಂಬಂಧಪಟ್ಟಂತೆ, ಟಿ.ಡಿ.ಆರ್. ನೀಡಿಕೆಗೆ ಸಂಬಂಧಿಸಿದ 47 ಕಡತಗಳು ಕಾಣೆಯಾಗಿದ್ದವು ಎಂಬ ತನಿಖಾ ಪ್ರಾಧಿಕಾರದ ದೃಢವಾದ ಹೇಳಿಕೆಯು, ಅರ್ಜಿದಾರನ ಅಭಿರಕ್ಷೀಯ ತನಿಖೆಯ ಸಂದರ್ಭದಲ್ಲಿ, ಅದೇ ರೀತಿಯ ಇನ್ನಿತರ ಅಪರಾಧಗಳನ್ನು ಹೊರತೆಗೆಯಬಹುದು ಎಂಬುದನ್ನು ಸಹ ಸೂಚಿಸಿರುತ್ತದೆ.ಇದು ನ್ಯಾಯಾಲಯದ ವಿವೇಚನೆಗೊಳಪಟ್ಟ ವಿಷಯವಾಗಿದೆ.ಅರ್ಜಿದಾರನು ಅಂತಹ ಕಡತಗಳು ತನ್ನ ಸುಪರ್ದಿಯಲ್ಲಿರಲಿಲ್ಲ ಎಂದು ಒತ್ತಿ ಹೇಳಿದರೂ ಸಹ, ಅಂಥ ಹೇಳಿಕೆಯನ್ನು ಹಾಗೆಯೇ ಪರಿಗಣಿಸಿ, ಪ್ರಾಧಿಕಾರಕ್ಕೆ ತನ್ನ ತನಿಖಾ ವ್ಯಾಪ್ತಿಯನ್ನು ಅವಶ್ಯಕವಿರಬಹುದಾದಷ್ಟರಮಟ್ಟಿಗೆ ವಿಸ್ತರಿಸಲು ಸಾಧ್ಯವಾಗಿಸುವ ಸಲುವಾಗಿ, ಅರ್ಜಿದಾರನು ತನ್ನನ್ನು ತಾನೇ ಅಭಿರಕ್ಷೀಯ ತನಿಖೆಗೆ ಒಳಪಡಿಸಿಕೊಳ್ಳಬೇಕು.

25. ಅರ್ಜಿದಾರನು, ತಾನು ತನಿಖಾ ಪ್ರಾಧಿಕಾರದೊಂದಿಗೆ ಸಹಕರಿಸುತ್ತಿದ್ದೇನೆಂಬ ಸುಳ್ಳು ಹೇಳಿಕೆಗಳನ್ನು ನೀಡುವ ಮೂಲಕ ನ್ಯಾಯಾಲಯದ ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾನೆ ಎಂಬ ಪ್ರಾಧಿಕಾರದ ಸಮರ್ಥನೆಯು ಗಂಭೀರ ಕಾಳಜಿಯದ್ದಾಗಿದೆ.ಅರ್ಜಿದಾರನು,ದಿನಾಂಕ: 15.05.2019, 23.05.2019 ಮತ್ತು

25.05.2019 ಈ ಮೂರೂ ಸಂದರ್ಭಗಳಲ್ಲಿ, ತನಿಖಾ ಪ್ರಾಧಿಕಾರದ ಕಚೇರಿಗೆ ಹೋಗಿರುವುದಾಗಿ ಹೇಳಿದ್ದರೂ ಸಹ, ಅರ್ಜಿದಾರನು ಕಚೇರಿಯನ್ನು ಪ್ರವೇಶಿಸಿರುವುದರ ಬಗ್ಗೆ ಚೀಟಿಯನ್ನು ಪಡೆದುಕೊಂಡಿದ್ದು, ತನಿಖಾ ಅಧಿಕಾರಿ ಅಥವಾ ಪೊಲೀಸ್ ಮಹಾನಿರೀಕ್ಷಕರನ್ನು ಭೇಟಿ ಮಾಡಿರುವುದಿಲ್ಲ ಮತ್ತು ವಾಸ್ತವವಾಗಿ, ಅರ್ಜಿದಾರನು ಯಾವುದೇ ಸಂಬಂಧಿತ ಅಧಿಕಾರಿಗಳನ್ನು ಭೇಟಿ ಮಾಡದಿದ್ದರೂ ಸಹ, ತಾನು ತನಿಖಾ ಪ್ರಾಧಿಕಾರದೊಂದಿಗೆ ಸಹಕರಿಸುತ್ತಿದ್ದೇನೆ ಎಂಬುದನ್ನು ತೋರಿಸಲು ಮಾತ್ರ ಕಚೇರಿಗೆ ಭೇಟಿ ಕೊಟ್ಟಿದ್ದನು ಎಂದು ಸ್ಥಿರೀಕರಿಸಲಾಗಿದೆ.ಈ ಹಂತದಲ್ಲಿ, ಸಾರ್ವಜನಿಕ ಪ್ರಾಧಿಕಾರವಾಗಿರುವ ಪ್ರತ್ಯರ್ಜಿದಾರರ ದೃಢ ಹೇಳಿಕೆಯನ್ನು ಅನುಮಾನಿಸಲು ಯಾವುದೇ ಕಾರಣಗಳಿರುವುದಿಲ್ಲ.* ಇದೂ ಕೂಡ ನಿರ್ಣಯ ಕೈಗೊಳ್ಳುವಲ್ಲಿ ನ್ಯಾಯಾಲಯದ ವಿವೇಚನೆಗೆ ಒಳಪಟ್ಟ ಅಂಶವಾಗಿದೆ.ವಾಸ್ತವವಾಗಿ, ಸತ್ರ ನ್ಯಾಯಾಧೀಶರು,ದಿನಾಂಕ: 27.05.2019 ರ ತಮ್ಮ ಆದೇಶದಲ್ಲಿ, ಅರ್ಜಿದಾರನ ವಾದವನ್ನು ಪರಿಗಣಿಸಿದ್ದು, ಅದನ್ನು ವಿವರವಾದ ಕಾರಣಗಳೊಂದಿಗೆ ತಿರಸ್ಕರಿಸಿರುತ್ತಾರೆ.

26. ಆರ್ಥಿಕ ಅಪರಾಧಗಳೊಂದಿಗೆ ವ್ಯವಹರಿಸುವಾಗ, ವಿಭಿನ್ನವಾದ ದೃಷ್ಟಿಕೋನದ ಅವಶ್ಯಕತೆಯಿರುತ್ತದೆ.ನಿಗದಿ ಮಾಡಿದ ಶಿಕ್ಷೆಯು ಜೀವಾವಧಿ ಶಿಕ್ಷೆ ಅಥವಾ ಮರಣದಂಡನೆ ಶಿಕ್ಷೆ ಆಗದಿದ್ದ ಮಾತ್ರಕ್ಕೆ ಅಪರಾಧವು ಸಣ್ಣಮಟ್ಟದ್ದು ಎಂದು ಊಹಿಸಲು ಯಾವುದೇ ಕಾರಣವಿರುವುದಿಲ್ಲ ಮತ್ತು ನಿರ್ಬಂಧಿಸುವ ಸೂತ್ರವನ್ನು ವಿಧಿಸಲಾಗುವುದಿಲ್ಲ.ಪ್ರಸ್ತುತ ಮೊಕದ್ದಮೆಯಲ್ಲಿ ರೂಪಿಸಲಾದಂತೆ ಆರ್ಥಿಕ ಅಪರಾಧಗಳಿಗೆ ಸಂಬಂಧಿಸಿದ ಅಗತ್ಯ ದೃಷ್ಟಿಕೋನವು, ' ನಿಮ್ಮಗಡ್ಡ ಪ್ರಸಾದ್ -ವಿರುದ್ಧ-ಕೇಂದ್ರ ತನಿಖಾ ದಳ(2013) 7 ಎಸ್ಸಿಸಿ 466' ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಗಮನಿಸಿದಂತೆ, ಪ್ಯಾರಾ 25 ರಲ್ಲಿ ಈ ಕೆಳಗಿನಂತೆ ಓದಲಾಗಿದೆ:

"25. ಆರ್ಥಿಕ ಅಪರಾಧಗಳು ಪ್ರತ್ಯೇಕ ವರ್ಗವನ್ನು ರೂಪಿಸುತ್ತವೆ ಮತ್ತು ಜಾಮೀನಿನ ವಿಷಯದಲ್ಲಿ ವಿಭಿನ್ನವಾದ ದೃಷ್ಟಿಕೋನದೊಂದಿಗೆ ಗಮನಿಸಬೇಕಾದ ಅಗತ್ಯವಿದೆ.ಅತಿ ಗಂಭೀರವಾದ ಒಳಸಂಚುಗಳು ಮತ್ತು ಸಾರ್ವಜನಿಕ ನಿಧಿಗಳ ಭಾರೀ ನಷ್ಟವನ್ನು ಒಳಗೊಂಡಂತಹ ಆರ್ಥಿಕ ಅಪರಾಧವನ್ನು ಗಂಭೀರವಾಗಿ ಪರಿಶೀಲಿಸಬೇಕು ಮತ್ತು ಒಟ್ಟಾರೆಯಾಗಿ, ದೇಶದ ಆರ್ಥಿಕತೆಯ ಮೇಲೆ ಪ್ರಭಾವ ಬೀರುವ ಮತ್ತು ಅದರಿಂದಾಗಿ ದೇಶದ ಆರ್ಥಿಕ ಆರೋಗ್ಯದ ಮೇಲೆ ಗಂಭೀರವಾದ ಅಪಾಯ ಒಡ್ಡುವ ಮಹತ್ತರವಾದ ಅಪರಾಧವೆಂದು ಪರಿಗಣಿಸಬೇಕು."

27. ತದನುಸಾರವಾಗಿ, ಈ ಮೇಲಿನ ಅಭಿಪ್ರಾಯಗಳ ಹಿನ್ನೆಲೆಯಲ್ಲಿ, ಅರ್ಜಿಯನ್ನು ವಜಾಗೊಳಿಸಲಾಗಿದೆ.ಪ್ರಸ್ತುತ ವ್ಯವಹರಣೆಗಳ ಸೀಮಿತ ಉದ್ದೇಶಕ್ಕಾಗಿ ಪರಿಶೀಲನೆಗಳನ್ನು ಮಾಡಲಾಯಿತೆಂದು ಮತ್ತು ತರುವಾಯದ ಹಂತಗಳಲ್ಲಿ ಜಾಮೀನನ್ನು ವಿಸ್ತರಿಸಲು ಕೋರುವ ಅರ್ಜಿದಾರನ ಹಕ್ಕನ್ನು ಮುಕ್ತವಾಗಿಡಲಾಗಿದೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

ಮುಖ್ಯ ಅರ್ಜಿಯ ವಿಲೇವಾರಿಯ ಹಿನ್ನೆಲೆಯಲ್ಲಿ, ಐ.ಎ.ಸಂಖ್ಯೆ: 1/2019 ನ್ನು ಅನಾವಶ್ಯಕ ಎಂದು ಹೇಳಿದ್ದು, ಅದು ಪರಿಗಣನೆಗೆ ಅಸ್ತಿತ್ವದಲ್ಲಿರುವುದಿಲ್ಲ.